P.W-2

<u>ದಿನಾಂಕಃ 20-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>

<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ವೈ ವಿ ಡಿ .ವಕೀಲರಿಂದಃ</u>

1. ನಾನು ಅಪಘಾತ ಆದ ತಕ್ಷಣ ಅರ್ಜಿದಾರರಿಗೆ ಯಾವುದೆ ಚಿಕಿತ್ಸೆ ನೀಡಿಲ್ಲ ಎಂದರೆ ಸರಿ. ಒಂದು ವರ್ಷದ ನಂತರ ಅರ್ಜಿದಾರರಿಗೆ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿ. ಅರ್ಜಿದಾರರಿಗೆ ಅಂಗನ್ಯೂನ್ಯತೆ ಪ್ರಮಾಣಪತ್ರ ಕೊಡುವಾಗ ಗಾಯದ ಪ್ರಮಾಣ ಪತ್ರ ಮತ್ತು ಬಿಡುಗಡೆ ಪ್ರಮಾಣ ಪತ್ರವನ್ನು ನೋಡಿರುತ್ತೇನೆ. ಅರ್ಜಿದಾರರು ಆ ಮೊದಲು ಯಾವ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು ಎಂದರೆ ಸಾಕ್ಷಿ ನಂಜಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು ಎಂದು ಹೇಳುತ್ತಾರೆ. ಅಂಗನ್ಯೂನ್ಯತೆ ಪ್ರಮಾಣ ಪತ್ರ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಎಲ್ಲಿಯೂ ಅರ್ಜಿದಾರರು ನಂಜಪ್ಪ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ನಮೂದು ಮಾಡಲು ಯಾವುದೆ ತೊಂದರೆ ಇರಲಿಲ್ಲ. ಅರ್ಜಿದಾರರ ಬಲಗಾಲಿನ ಎಕ್ಸರೆ ಮಾಡಲಾಗಿ ಅದರಲ್ಲಿ ಟಿಬಿಯಾ ಮೂಳೆ , ಹ್ಯುಮರಸ್ ಮೂಳೆ ಮುರಿತ ಆಗಿರುವುದು ಕಂಡು ಬಂದಿರುತ್ತದೆ. ಸದರಿ ಮೂಳೆ ಮುರಿತ ಸೊಟ್ಟವಾಗಿ ಕೂಡಿಕೊಂಡಿರುತ್ತದೆ. ಅರ್ಜಿದಾರರ ಮೂಳೆ ಮುರಿತಕ್ಕೆ ಅಪರೇಶನ್ ಮಾಡಲಾಗಿರುತ್ತದೆ.

2. ಮೂಳೆ ಮುರಿತವನ್ನು ರಾಡ್ ಮತ್ತು ಪ್ಲೇಟ್ ಅಳವಡಿಸಿ, ಆಪರೇಶನ್ ಮಾಡಿರುತ್ತಾರೆ. ಅರ್ಜಿದಾರರು ನಂಜಪ್ಪ ಆಸ್ಪತ್ರೆ ಮತ್ತು ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನನಗೆ ಹೇಳಿರುತ್ತಾರೆ. ನಾನು ಅದರ ಬಗ್ಗೆ ಅಂಗನ್ಯೂನ್ಯತೆ ಪ್ರಮಾಣ ಪತ್ರದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಓ ಆರ್ ಎಫ್ ಎಂದರೆ ಒಪನ್ ರಿಡಕ್ಷನ್ ಆ್ಯಂಡ್ ಇಂಟರ್ನಲ್ ಫಿಕ್ಷೇಶನ್ ಆಗಿರುತ್ತದೆ. ಅರ್ಜಿದಾರರಿಗೆ ಓ ಆರ್ ಐ ಎಫ್ ಮಾಡಿರುತ್ತಾರೆ. ಬಿಡುಗಡೆ ಪ್ರಮಾಣ ಪತ್ರದಲ್ಲಿ ಅರ್ಜಿದಾರರಿಗೆ ನೈಲಿಂಗ್ ಮತ್ತು ಪ್ಲೇಟ್ ಅಳವಡಿಸಿದ ಬಗ್ಗೆ ನಮೂದು ಇರುತ್ತದೆ. ನಾನು ತೆಗೆದ ಎಕ್ಸರೆ ಯಲ್ಲಿ ಆ ಬಗ್ಗೆ ನಮೂದು ಇರುತ್ತದೆ. ಅರ್ಜಿದಾರರಿಗೆ ಆದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆದ ಮೂಳೆ ಮುರಿತ ಸರಿಯಾಗಿ ಜೋಡಣೆಯಾಗಿರುತ್ತವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಆದ ಗಾಯ ಸಾಮಾನ್ಯ ಸ್ವರೂಪದ ಗಾಯ ಆಗಿದ್ದರೂ ಸಹ ಹಾಗೂ ಮೂಳೆ ಮುರಿತ ಸರಿಯಾಗಿ ಜೋಡಣೆ ಆಗಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಅರ್ಜಿದಾರರಿಗೆ ದಿನನಿತ್ಯದ ಕೆಲಸ ಮಾಡಲು ಯಾವುದೆ ತೊಂದರೆ ಇರುವುದಿಲ್ಲ ಎಂದರೆ

ಸರಿಯಲ್ಲ. ಅರ್ಜಿದಾರರಿಗೆ ಈಗ ನಡೆದಾಡಲು, ಇಳಿಜಾರು ಪ್ರದೇಶದಲ್ಲಿ ಇಳಿಯಲು ಮೆಟ್ಟಿಲು ಹತ್ತಲು ಮತ್ತು ಕುಳಿತುಕೊಳ್ಳಲು ತೊಂದರೆಯಾಗುತ್ತದೆ ಎಂದು ಅರ್ಜಿದಾರರ ಹೇಳಿಕೆಯ ಆಧಾರದ ಮೇಲೆ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಅರ್ಜಿದಾರರನ್ನು ಯಾವುದೆ ಪರೀಕ್ಷೆ ಮಾಡದೆ ಇದ್ದರೂ ಸಹ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ. ಚಿಕಿತ್ಸೆ ನೀಡಿದ ವೈದ್ಯರು ಮಾತ್ರ ಸರಿಯಾದ ಅಂಗನ್ಯೂನ್ಯತೆ ನಿರ್ಧರಿಸಲು ಸಾಧ್ಯ ಎಂದರೆ ಸರಿಯಲ್ಲ. ಚಿಕಿತ್ಸೆ ನೀಡಿದ ವೈದ್ಯರು ಅರ್ಜಿದಾರರಿಗೆ ಯಾವುದೆ ಅಂಗನ್ಯೂನ್ಯತೆ ನೀಡಲು ಬರುವುದಿಲ್ಲ ಎಂದು ಹೇಳಿದ ನಂತರ ಒಂದು ವರ್ಷಗಳ ನಂತರ ನನ್ನ ಬಳಿ ಬಂದು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೆ ಅಂಗನ್ಯೂನ್ಯತೆ ಇಲ್ಲದೆ ಇದ್ದರೂ ಸಹ ಹೆಚ್ಚಿನ ಪರಿಹಾರ ಬರಲಿ ಎಂದು ಸಹಾಯ ಮಾಡಲು ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಗ ಚೇಧ ಆದರೆ ಮಾತ್ರ ಶೇ 60 ರಷ್ಟು ಅಂಗನ್ಯೂನ್ಯತೆ ಬರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೆ ಅಂಗನ್ಯೂನ್ಯತೆ ಇಲ್ಲದೆ ಇದ್ದರೂ ಸಹ ಶೇ 60 ರಷ್ಟು ಅಂಗನ್ಯೂನ್ಯತೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನಾನು ನಿರ್ಧಿಷ್ಟ ಭಾಗಕ್ಕೆ ನೀಡಿರುತ್ತೇನೆ. ಸಂಪೂರ್ಣ ದೇಹಕ್ಕೆ ಹೋಲಿಕೆ ಮಾಡಿದಾಗ ಅಂಗನ್ಯೂನ್ಯತೆ ಕಡಿಮೆ ಆಗುತ್ತದೆ ಎಂದರೆ ಸ್ವಲ್ಪ ಪ್ರಮಾಣ ಕಡಿಮೆ ಆಗುತ್ತದೆ ಎಂದು ಹೇಳುತ್ತಾರೆ. ಎಷ್ಟು ಪ್ರಮಾಣ ಎಂದು ಹೇಳಲಾಗುವುದಿಲ್ಲ. ಅರ್ಜಿದಾರರಿಗೆ ಯಾವುದೆ ಅಂಗನ್ಯೂನ್ಯತೆ ಇಲ್ಲದೆ ಇದ್ದರೂ ಸಹ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರನ್ನು ಪರೀಕ್ಷೆ ಮಾಡದೆ ಅಂಗನ್ಯೂನ್ಯತೆ ಪ್ರಮಾಣ ಪತ್ರದಲ್ಲಿ ಅವರಿಗೆ ಇರುವ ತೊಂದರೆ ಬಗ್ಗೆ ನಮೂದು ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಏನೂ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/–

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.